ಒಂದು ಕೋಕಾ, ಎರಡು ಜರ್ಮನ್ ಬಗೋಣಿ, ಒಂದು ಈಚಲ ಬುಟ್ಟಿ, ಒಂದು ಕಡ್ಲಿಹಿಟ್ಟಿನ ಡಬ್ಬಿ, ಒಳ್ಳೆಣ್ಣಿ ಡಬ್ಬಿ, ಒಂದು ಸ್ಟೋ, ಒಂದು ಕಡಾಯಿ, ಎರಡು ಜಾರಿ, ಒಂದು ಛತ್ರಿ, ಕೋಲು, ಒಂದು ಘಾಸಲೇಟ್ ಎಣ್ಣಿ ಡಬ್ಬಿ. ಇವಿಷ್ಟು ಭಜಿ ಶರಣಮ್ಮಳ ಬಾರದಾನಿ. ಆಕಿ ವಾರದಾಗ ಆರು ದಿವಸ ಊರೂರು ತಿರುಗಿ ಸಂತಿ ದಿವಸ ಯಾಪಾರ ಮಾಡಾಕ ಹೋಗತಿದ್ದಳು. ಆಕಿ ಗಂಡ ಗುರಲಿಂಗ ದೇಶಾವರಿ ಮಾತಾಡ್ತಾ, ರಿಕಾಮಿ ತಿರಗತಾ ಯಾರರೇ ಪರಿಚಯ ದವರು ಸಿಕ್ಕರ ಅಸಹ್ಯವಾಗಿ ಹಲ್ಲ ಕಿಸ್ಕೊಂತ, ತಲಿ ತುರಸಕೊಂತ 'ಯಣ್ಣಾ ಒಂದು ಬೀಡಿ ಇದ್ದರ..' ಅನ್ನವನು. ಶರಣಮ್ಮಗ ವಾರಗಟ್ಟಲೆ ದುಡದು ಇವನ ವಡ್ಡಲ ತುಂಬೂದಾಗಿತ್ತು. ಬರೀ ಭಜಿ ಮಾರಿ ಮೂರ ಮಕ್ಕಳ ಸಾಲಿ, ಸಮದ, ಸಂಸಾರ ಜಗ್ಗೂದು ಆಕಿಗೂ ವಜ್ಜಿ ಆಗಿತ್ತು. ಮಕ್ಕಳು ಇನ್ನೂ ಬಾಳ ಸಣ್ಣೂ ಇದ್ವು. ಒಂದು ಗಂಡು, ಎರಡು ಹೆಣ್ಣು. ಹುಡುಗ ಶಿವಬಸುನೇ ದೊಡ್ಡವನು. ದೊಡ್ಡಂವ ಅಂದರೂ ಅವನಿಗಿ ಬಾಳ ಅಂದ್ರ ಹದಿನಾಲ್ಕು ವರ್ಷ. ಅದೇ ಏಳನೆತ್ತೆ ಪಾಸಾಗಿ ಹೈಸ್ಕೂಲ್ ಕಟ್ಟಿ ಹತ್ತಿದ್ದ. ಬಾಳ ಅಂದ್ರ ಬಾಳ ಉಡಾಳ. ಶರಣಮ್ಮ ಮಾತಿಗೊಮ್ಮ 'ನಿಮ್ಮ ಅಪ್ಪ ಒಬ್ಬನೇ ಅಂದ್ರ ನೀ ಅವನ್ನೂ ಮೀರಸತಿದಿ ನೋಡು' ಅಂತಿದ್ದಳು. ಹುಡುಗೇರು ಅವನಿಗಿಂತಲೂ ಸಣ್ಣವರು. ಒಬ್ಬಾಕಿಗಿ ಐದು ವರ್ಷ, ಅದು ಅಜ್ಜಿ ಜೋಡಿ ಮನ್ಯಾಗೇ ಇರತಿತ್ತು. ಇನ್ನೊಂದು ಹುಡುಗಿಗಿ ಹತ್ತು ವರ್ಷ, ಆಕಿ ಐದನೆತ್ತೆ ಓದತಿದ್ದಳು. ಅಲ್ಲೆ ಊರೊಳಗ ಮನಿ ಮುಂದಿನ ಸಾಲಿಗಿ ಹೋಗತಿದ್ದಳು. ಎಡವಿ ಬಿದ್ದರ ಸಾಲಿಯೊಳಗ ಅನ್ನೂವಷ್ಟು ಸನ್ಯಾಕ ಇದ್ದರೂ ಅಣ್ಣ ಶಿವಬಸು ವಾರದಾಗ ಒಂದು ದಿವಸ ಸಾಲಿಗಿ ಹೋದರ ಹೆಚ್ಚ ಅನಬೇಕು. ಹಂಗಾಗೇ ಅಂವಗ ನೆಟ್ಟಗ ಕನ್ನಡ ಓದಾಕೂ ಬರ್ತಾಇರಲಿಲ್ಲ.. ಬರಿಯಾಕೂ ಬರ್ತಿರಲಿಲ್ಲ. ಶರಣಮ್ಮ ಸಂತಿಗಿ ಹೊಂಟರ ಕೈಯೊಳಗ ಯಾವುದರೆ ಡಬ್ಬಿ ಹಿಡಕೊಂಡು ಇವನೂ ತಯಾರಾಗಿ ಬಿಡತಿದ್ದ. ಶರಣಮ್ಮ ಆದರ ಆಗೂವಲ್ದು ಅಂತ ಸುಮ್ಮ ಇರತಿದ್ದಳು. ಮನ್ಯಾಗ ಉಳದು ಯಾರದರೆ ಕೋಳಿ ತತ್ತಿ ಕದ್ದ..ಒಣಾ ಹಾಕಿರೋ ಹಪ್ಪಳ ಕದ್ದ, ಅಡಿ ಹಾಕಿರೋ ಬಾಳೆಹಣ್ಣು ಕದ್ದ ಅಂತ ಒಣಾ ಲಿಗಾಡು ಕೇಳಿ ಆಕಿಗೂ ಸಾಕಾಗಿತ್ತು. ಬಂದ್ರ ಬರಲಿ ಈಗಿನಿಂದೇ ದುಡಿಯಾಕ ಹತ್ತದರ ಚಲೊ ಆಗತೈತಿ ಅಂತ ಲೆಕ್ಕಾ ಹಾಕಿ, ಜೋಡಿ ಕರಕೊಂಡು ಹೋಗತಿದ್ದಳು.

ಶರಣಮ್ಮ ಯಾವುದೇ ಊರಿನ ಸಂತಿಗಿ ಹೋದರೂ ತಂದೇ ಒಂದು ಠಿಕಾಣಿ ಮಾಡಕೊಂಡಿದ್ದಳು. ಆಕಿ ಕೂಡೊ ಜಾಗದೊಳಗ ಮತ್ತ ಬ್ಯಾರೇ ಯಾರೂ ಟೆಂಟ್ ಹಾಕತಿರಲಿಲ್ಲ. ಭಜಿ ಶರಣಮ್ಮ ಅಂದ್ರ ಎಲ್ಲಾ ಊರ ಸಂತಿಯೊಳಗೂ ಬಾಳ ಫೇಮಸ್ಸು ಆಕಿ ಬರೀ ರೊಕ್ಕಾ ಅಟ್ಟೇ ಅಲ್ಲ, ಜ್ವಾಳ, ಗೋದಿ, ಸಜ್ಜಿ, ಹತ್ತಿ, ಕುಸಬಿ ಏನು ತಂದು ಕೊಟ್ಟರೂ ಭಜಿ ಕಟ್ಟಿ ಕೊಡುವಕ್ಕಿ. ಆಕಿ ಉಳ್ಳಾಗಡ್ಡಿ, ಅಜಿವಾನ ಹಾಕಿ ಮಾಡೊ ಗುಂಡ ಭಜಿ ಬಾಳ ಸ್ವಾದ ಇರತಿದ್ವು. ಒಮ್ಮೊಮ್ಮ ಗಿರಾಕಿ ಬಾಳಾಗಿ ಆಕಿಗೂ ಅವಡಸವಡ ಆಗತಿತ್ತು. ಅಂಥಾ ವ್ಯಾಳೆದೊಳಗ ಮಗ ಶಿವಬಸು ಆಕಿಗಿ ಆಸರ ಆಗತಿದ್ದ. ಸಂಜೀಮುಂದ ಸಂತಿ ಸೊರಗೂ ಮಟ ಅಂವಾ ಕೆಲಸಾ ಮಾಡದರ, ಅವನಿಗಿ ಸಿನೇಮಾ ನೋಡಾಕ ರೊಕ್ಕ ಕೊಡೊ ಕಂಡೀಶನ್ ಮ್ಯಾಲ ಅಂವಾ ಕೆಲಸಾ ಮಾಡತಿದ್ದ. ಗಳಿಗ್ಗೊಮ್ಮ 'ಯವ್ವಾ ನೀ ನನಗ, ಸಿನೆಮಾಕ ರೊಕ್ಕ ಕೊಡ್ತೀನಿ ಅಂದೀದಿ' ಅಂತ ನೆನಪ ಮಾಡತಿದ್ದ. ಹಿಂದ ಎರಡು ಮೂರು ಸಾರಿ ಹಿಂಗೇ ಹೇಳಿ ಅಂವಗ ಮೋಸ ಆಗಿತ್ತು. ಶರಣಮ್ಮ 'ನಂದೇ ಒಂದು ಸಿನೆಮಾ ಐತಿ ನೋಡು, ಅದ್ಯಾವ ಸಿನೆಮಾನೋ ಮಳ್ಳ, ಅದೇ ರೊಕ್ಕದೊಳಗ ನಿನಗ ಚುರಮುರಿ ಸೂಸಲಾ ಮಾಡಿಕೊಡ್ತೀನಿ' ಅಂದಿದ್ದಳು. ಈ ಸಾರಿ ಅಂವಾ ಬರೂ ಮುಂದೇ ಕರಾರ ಮಾಡಿ ಸಂಪತ್ತಿಗೆ ಸವಾಲ ಸಿನೆಮಾ ನೋಡಾಕ ರೊಕ್ಕಾ ಕೊಡಬೇಕು ಅನ್ನೋ ಕರಾರ್ ಮ್ಯಾಲ ಸಂತಿ ದಿನ ಓಡ್ಯಾಡಿ ಕೆಲಸ ಮಾಡಿದ್ದ. ಯಾರರೇ ಭಜಿ ಆರ್ಡರ್ ಕೊಟ್ಟರ ಎಮ್ಮಿ ಮ್ಯಾಲ ಬಲಗೈ ಎತ್ತಿ ಕುಂತಿರೋ ರಾಜಕುಮಾರನನ್ನ ನೆನಪು ಮಾಡ್ಕೊಂಡು, ಪುಟು ಪುಟು ಅಂತ ಓಡ್ಕೊಂತ ಭಜಿ ಕೊಟ್ಟು ಬರತಿದ್ದ. ಹೊತ್ತು ಇಳದಂಗ ಅವ್ವ ರಾಗಾ ಬದಲಸದರ ಹ್ಯಾಂಗ ಮಾಡೂದು ಅನ್ನೂ ಚಿಂತಿ ಹತ್ತಿತ್ತು. ತುಸು ಗದ್ದಲ ಕಡಿಮಿ ಆಗಿಂದ ಹಗೂರಕ ಅವ್ವಳ ಬಾಜೂ ಕುಂತಂಗ ಮಾಡಿ 'ಯವ್ವಾ, ಸಂಪತ್ತಿಗೆ ಸವಾಲ್' ಅಂದ. ಆಕಿ ಹಿಟ್ಟ ಕಲಸಗೊಂತ 'ಮುಂಜಾನೆ ಬರೊ ಮುಂದೇ ಹೇಳೀನೆಲ್ಲ, ತಗೊ ಸುಳ್ಳೆ ನಿನಗರೇ ಯಾಕ'ಅಂತ ಎರಡು ರೂಪಾಯಿ ಕೊಟ್ಟಿಂದ ಶಿವಬಸು ಖುದ್ದ ರಾಜಕುಮಾರೇ ಆಗಿದ್ದ. ಆ ದಿವಸ ಯಾಪಾರೂ ಚಲೋ ಆಗಿತ್ತು. ಹಿಂಗಾಗಿ ಶರಣಮ್ಮ ಬಾಳ ಹುರುಪ ಆಗಿದ್ದಳು. ಮರುದಿವಸ ಸೋಮಾರ ಇತ್ತು ಆ ದಿವಸ ಆಕಿ ಮನ್ಯಾಗೇ ಉಳದು ಎಲ್ಲಾ ಕೆಲಸ ಮಾಡತಿದ್ದಳು. ಆಕಿ ಅತ್ತಿ ಮಲ್ಲಮ್ಮ ಮಕ್ಕಳ ದೇಕರೇಕಿ ಮಾಡವಳು. ಹಿಂಗಾಗಿ ಮನಿಕಡಿ ಶರಣಮ್ಮಗ ಅಟ್ಟು ಚಿಂತಿ ಇರಲಿಲ್ಲ. ಇಬ್ಬರೂ ಹೆಣ್ಣು ಹುಡಗೇರ ಪಾಲಿಗಿ ಆ ಮುದುಕೀನೇ ಅವ್ವ ಆದಂಗ ಆಗಿದ್ದಳು. ಶರಣಮ್ಮ ಮಕ್ಕಳ ಜೋಡಿ ಇರೂದು ಅಂದ್ರ ಸೋಮಾರ ಮಾತ್ರ. ಅವತ್ತು ಅತ್ತಿ ಜೋಡಿ ಕೂಡಿ ಮಕ್ಕಳಿಗಿ ಚಲೊ ಚಲೊ ಅಡಗಿ ಮಾಡಿ ಹಾಕವಳು. ಮಗ ಗುರಲಿಂಗಗ ಮಲ್ಲವ್ವ 'ಅಲ್ಲೋ ಮಗನ, ಕುಂತು ತಿಂದರ ಹ್ಯಾಂಗ ಈಡಾಗಬೇಕು.. ನೀನೂ ಎಲ್ಲೆರೆ ದುಡೀಬೆಕಪಾ' ಅಂದರ ಅಂವಾ ಮಾತು ಬರಲಾರದ ಮೂಗನಂಗ ಗಂಗಾಳದೊಳಗಿನ ನುಚ್ಚ ಗಬಗಬಾಂತ ನಿಗಟ ಗಾಯಬ್ ಆಗಿಬಿಟ್ಟಿದ್ದ. ಮತ್ತವನಿಗಿ ಹಸಿವಾದಾಗೇ ಮನಿ ನೆನಪಾಗತಿತ್ತು.

* * *

ಶಿವಬಸು ಸಂಪತ್ತಿಗೆ ಸವಾಲ್ ಸಿನೆಮಾ ನೋಡಿದ್ದೇ ನೋಡಿದ್ದು, ಥೇಟ್ ರಾಜಕುಮಾರನಂಗೇ ನಡಿಯೂದು, ಸೊಂಟಕ್ಕ ಟವಲ್ ಬಿಗಿಯೂದು ಮಾಡಾಕ ಸುರು ಮಾಡಿದ್ದ. ಮನ್ಯಾಗ ಮಜ್ಜಗಿ ಕಂಬದ ಬಾಜೂ ಇರೋ ಕೊಡಲಿ ತಗೊಂಡು ಜೋರಾಗಿ 'ಏ ಸಾಹುಕಾರ ಸಿದ್ದ, ತಗೋ' ಎಂದು ಡೈಲಾಗ್ ಹೇಳುತ್ತ ಹಿತ್ತಲದೊಳಗಿರೋ ಔಡಲ್ ಗಿಡ ಕಡದು ಹಾಕಿ, ಅಜ್ಜಿ ಮಲ್ಲಮ್ಮನ ಕಡೆಂದ ಏಟು ತಿಂದಿದ್ದ. ಸಾಲಿಗಿ ಹೋಗು, ಹೋಗಂತ ತಲಿ ಒಡಕೊಂಡು ಆ ಮುದುಕಿಗೂ ಸಾಕಾಗಿತ್ತು. 'ತಂಗಿ ಈ ಕುರಸಾಲ್ಯಾ ಸಾಲಿಗಿ ಹೋಗಲ್ಲ, ಸುಮ್ಮ ನಿನ್ನ ಜೋಡಿ ಸಂತಿಗಿ ಕರಕೊಂಡು ಹೋಗು' ಅಂತ ಆಕಿ ಹೇಳೂದಿತ್ತು. ಅವತ್ತು ಶಿವಬಸು ಅವ್ವನ ಜೋಡಿ ರಾಂಪುರ ಸಂತಿಗಿ ಹೋಗಿದ್ದ. ಶರಣಮ್ಮ ತಾ ಕೂಡೊ ಖಾಯಂ ಜಾಗ ಆಲದ ಮರದ ಕೆಳಗ ತನ್ನ ಎಲ್ಲಾ ಬಾರದಾನಿ ಇಟಗೊಂಡು, ಎಂದಿನಂಗ ಕಡಾಯಿಯೊಳಗ ಎಣ್ಣಿ ಸುರವಿ, ಸ್ಟೋವ್ ಹಚ್ಚಿ ಎಣ್ಣಿ ಕಾಯಾಕ ಇಟ್ಟು, ಭಜಿಗಿ ಹಿಟ್ಟ ಕಲಸೂ ಮುಂದ ಅವ್ವಳ ಬಾಜೂ ಕುಂತು 'ಯಾರೇ ಕೂಗಾಡಲಿ ಊರೇ ಹೋರಾಡಲಿ' ಅಂತ ಹಾಡತಿದ್ದ.

ಶರಣಮ್ಮ ನಕ್ಕೊಂತ ಮಗ ಹಾಡೂದು ಕೇಳಕೊಂತ ಹಿಟ್ಟ ಕಲಸತಿದ್ದಳು. ಆಕಿ ಕಡಾಯಿಯೊಳಗ ಭಜಿ ಬಿಟ್ಟಿದ್ದೇ ಗಿರಾಕಿ ಸುರು ಆದ್ವು. ಕೊಡಾಕ ಪುರಸತ್ತಿರದಂಗ ಗಿರಾಕಿ ಇರತಿದ್ವು. ಅದು ಬ್ಯಾಸಗಿ ಬಿಸಲ ತಡಕೊಳುವಂಗಿರಲಿಲ್ಲ. ಶರಣಮ್ಮಗ ಒಂದು ಕಡಿ ಬೆಂಕಿ ಕಾವು, ಇನ್ನೊಂದು ಕಡಿ ಬಿಸಲಿನ ಝಳದ ತಾಪ ಅಂಥದರೊಳಗೂ ಆಕಿ ಹಂಗೇ ಸೀರಿ ಸೆರಗಲೆ ಮುಖ ಒರಸಗೊಂತ ಭಜಿ ಬಿಡತಿದ್ದಳು. ಊರ ಹೊರಗಿರೋ ಪಾಟೀಲರ ಅಡತಿ ಅಂಗಡಿಗಿ ಭಜಿ ಕೊಡಾಕ ಹೋಗಿದ್ದ ಶಿವಬಸು ಸಂಪತ್ತಿಗೆ ಸವಾಲ್ ಗುಂಗಿನೊಳಗ ಅಲ್ಲೇ ತುಸು ದೂರದೊಳಗ ಬಾಂದಾ ಮ್ಯಾಲ ಮೈತಿದ್ದ ಎಮ್ಮಿ ನೋಡದ. ಅದರ ಸನ್ಯಾಕ ಬಂದ. ಆ ಎಮ್ಮಿ ಈ ರಾಜಕುಮಾರನ ಹೊಳ್ಳಿ ನೋಡತು. ಅದು ತುಸು ಬುಡ್ಡೆಮ್ಮಿ, ಅದರ ಸನ್ಯಾಕ ಬಂದು ಹಗೂರಕ ಅದರ ಸಲಾಗೇ ಹಾಡೂವಂಗ 'ಯಾರೇ ಕೂಗಾಡಲಿ..' ಅಂದ. ತನ್ನ ಮಾರಿ ಮ್ಯಾಲಿನ ನೊಣ ಓಡ್ಸಾಕ ಅದು ಹೌದು ಅನ್ನೂವಂಗ ತಲಿ ಅಡಿಸಿತು. ಶಿವಬಸು ಮತ್ತೂ ತುಸು ಸನ್ಯಾಕ ನಿಂತ.. ಅದನ್ನ ನೋಡದರ ವಯಸ್ಸಾದಂಗಿತ್ತು. ಬಾಳ ಸಂಭಾವಿತ ಕಾಣ್ತಿತ್ತು. ಮೊದಲ ಅದರ ಹೊಟ್ಟಿ ಮ್ಯಾಲ ಕೈಯಾಡಿಸಿದ. ಅದು ಸುಮ್ಮಿತ್ತು. ಅದರ ಹೊಟ್ಟಿಗಿ ಬೆನ್ನ ಹಚ್ಚಿ ನಿಂತ ಆವಾಗೂ ಅದು ಪರಕ್.. ಪರಕ್.. ಅಂತ ಕರಕೀ ಜಬರ ಹರಿಯೂದ ರೊಳಗಿತ್ತು.

ಶಿವಬಸುಗ ಖಾತ್ರಿ ಆಗಿ, ಅದರ ಡುಬ್ಬ ಹಿಡದು ಮ್ಯಾಲ ಹತ್ತದ.. ಕೈ ಜಾರತು.. ಮತ್ತೊಮ್ಮ ಹಂಗೇ ಕಟಬಿಟ ಮಾಡಿ, ಮ್ಯಾಲ ಕುಂತ. ಕೈಯಾಗ ಒಂದು ಕೊಡಲಿ ಇದ್ದರ ಥೇಟ್ ರಾಜಕುಮಾರೇ ಅನ್ಕೊಂತ